ಗರಿಗರಿ...' ಜೋರ್ಡಾನ್ ಕತೆಯಿಂದ ಇತ್ತ ತಿರುಗಿಸಲು ಮಗಳು ಮಧ್ಯೆ ಪ್ರವೇಶಿಸಿದಳು: 'ಅಪ್ಪಾ... ಪ್ರೆಷರ್ರು, ಷುಗರ್ರು ಎಲ್ಲಾ ಮಾತ್ರೆ ಸರಿಯಾಗಿ ತೊಗೋತಿದೀರಿ ಅಲ್ವಾ?...' ಅವರಂದರು: 'ಯಾಕೆ ರೂನಿ? ಪಕೋಡ ಜಾಸ್ತಿ ತಿಂದಿಲ್ಲ ನಾನು!...'

'ಸರಿ, ನಾಳೆ ಬ್ಲೂರಿಜ್ ಪಾರ್ಕ್‌ವೇ ನೋಡೋಣ, ಬೆಳಿಗ್ಗೆನೆ ಹೊರಡೋಣ' ಅಂದ ಪ್ರಶಾಂತ.

ಆಷ್‌ವಿಲೆಯಿಂದ ಎಂಟು ಗಂಟೆಗೆಲ್ಲಾ ಕಾರಲ್ಲಿ ಹೊರಟರು. ಒಂದು ಕಡೆ ನಿಲ್ಲಿಸಿದ ಪ್ರಶಾಂತ. 'ಇದು ಗ್ರಾಂಡ್‌ಫಾದರ್ಸ್ ಮೌಂಟೇನ್' ಅಂದ. 'ಅಂದ್ರೆ ತಾತಾ, ಇದು ನಿಮಗೆ ಡೆಡಿಕೇಟ್ ಮಾಡಿದ್ದು...' ನಕ್ಕಳು ಮಮ್ಮೊಗಳು. ಆ ಜಾಗೆಯಲ್ಲಿ ನೋಟ ಅದ್ಭುತರಮ್ಯವಾಗಿತ್ತು. ಪರ್ವತದಂಚು, ಕಣಿವೆ ಮತ್ತು ದಿಗಂತಗಳ ಸಂಗಮ ದೈವಿಕಚೆಲುವಿನಲ್ಲಿ ಮೀಯುತ್ತಿತ್ತು. 'ಇದು ಅಮೆರಿಕಾದ ಉದ್ದನೆಯ ಪಾರ್ಕ್‌ವೇ; ಅದು ಬ್ಲೂರಿಜ್ ಪರ್ವತಶ್ರೇಣಿ' ಕಾರು ನಡೆಸುತ್ತ ವಿವರಣೆ ನೀಡಿದ ಪ್ರಶಾಂತ. ಪರ್ವತಶ್ರೇಣಿಯ ಪಕ್ಕದಲ್ಲೇ ಸಾಗುತ್ತಿತ್ತು ರಸ್ತೆ. ರಸ್ತೆಯ ಪಕ್ಕ ಉದ್ದಕ್ಕೂ ಹಸಿರುಚಾಪೆ, ಅದರಾಚೆ ಒಂದು ಕಡೆ ಬೆಟ್ಟ, ಇನ್ನೊಂದು ಕಡೆ ಹಸಿರು ಕೊಳ್ಳ, ಗುಡ್ಡ, ಮೈದಾನ. ಕಣ್ಣು ತಣಿಸುವ ಚೆಂದನೆಯ ದೃಶ್ಯ, ಬೆಟ್ಟದ ಹಿತಕರ ಹವೆ ಇಷ್ಟು ದಿನದ ಜಡತೆಯನ್ನು ಹೊಡೆದೋಡಿಸಿ ಉಲ್ಲಸಿತರನ್ನಾಗಿ ಮಾಡಿತು. 'ಕೆರೋಲಿನ ಕರ್ನಾಟಕದ ಮಲೆನಾಡ ನೆನಪು ತರುತ್ತೆ. ನೀವು ಅದೃಷ್ಟವಂತರಪ್ಪಾ...' ಮೆನಸ್ ಅಂದರು ತನ್ಮಯರಾಗಿ. ಒಂದು ಜಾಗೆಯಲ್ಲಿ ದೊಡ್ಡ ಪ್ರವೇಶದ್ವಾರ ಮತ್ತದರ ಮೇಲೆ ಬೃಹದಾಕಾರದ ಬೋರ್ಡು ಕಂಡಿತು. ವೆಲ್ಕಂ ಟು ಚಿರೋಕಿ ಇಂಡಿಯನ್ಸ್ ರಿಸರ್ವೇಶನ್ ಅಂತ ದನಿ ಹೊರಡಿಸಿ ಓದಿದರು. ಅವರ ಮುಖಭಾವ ಗಮನಿಸಿದ ಪ್ರಶಾಂತ ವಿವರಿಸಿದ. 'ಮಾವ, ಇಂಡಿಯನ್ಸ್ ಅಂದರೆ ಭಾರತೀಯರಿಗೂ ಇವರಿಗೂ ಯಾವ ಸಂಬಂಧವಿಲ್ಲ. ಈ ಚಿರೋಕೀ ಇಂಡಿಯನ್ಸ್ ಅಮೆರಿಕದ ಮೂಲನಿವಾಸಿಗಳು. ಚಿರೋಕಿ ಬುಡಕಟ್ಟಿಗೆ ಸೇರಿದೋರು. ಸರಕಾರ ಇಂಡಿಯನ್ ರಿಮೋವಲ್ ಆಕ್ಟ್ ತಂದನಂತರ ಆದದಿದ್ದೆಲ್ಲ. ಇದು ಚಿರೋಕೀ ಹಿಸ್ಟೋರಿಕ್ ಟೆರಿಟರಿಯ ಭಾಗ.' ತಾತ ಇದ್ದಕ್ಕಿದ್ದಂತೆ ಗಂಭೀರರಾದ್ದು ಕಂಡು 'ಏನಾಯ್ತು ತಾತಾ?' ಕೇಳಿದಳು ಮೊಮ್ಮಗಳು. '...ಏನಿಲ್ಲಮ್ಮ' ಅಂತ ನಕ್ಕರು ಮೆನಸ್. ಅಲ್ಲಲ್ಲಿ ನಿಲ್ಲುತ್ತ ನೋಡುತ್ತ ಸಮಯ ಕಳೆದದ್ದೆ ಗೊತ್ತಾಗಲಿಲ್ಲ

**ಮೂರುತಿಂಗಳಿಗೇಂತ ಬಂದ ಅಪ್ಪ ಅಮ್ಮ ಒಂದು ತಿಂಗಳಿಗೇ, ಅದೂ ಸತ್ಯಭಾಮೂಳ ಮನೆಗೆ ಹೋಗದೆ ಮರಳುವಂತಾಗಿದ್ದಕ್ಕೆ ರುಕ್ಮಿಣಿಯ ಕಣ್ಣು ಆರ್ದ್ರವಾಯಿತು. 'ರುಕ್ಕು, ಇಲ್ಲಿನ ಹವೆ ಒಗ್ಲಿಲ್ಲಾಂತ ಕಾಣುತ್ತೆ. ಈ ಪರಿಸ್ಥಿತೀಲಿ ಅವರು ಹೇಳಿದ್ದೇ ಸರಿಯೇನೋ ಅಲ್ವ? ಊರಿನ ಹವೇಲಿ ಎಲ್ಲಾ ಸರಿ ಹೋಗ್ಬಹುದೇನೋ...' ಎಂದ ಪ್ರಶಾಂತ.**

ಗ್ರಾಂಡ್‌ಕ್ಯಾನ್ಯನ್ ನೋಡಬೇಕು, ಅದರ ಮೇಲೆ ನಿರ್ಮಿಸಿರುವ ಲಾಳಾಕಾರದ ಗಾಜಿನ ಅಟ್ಟಣೆ ಮೇಲೆ ನಿಂತು ಕಾಲಡಿಯ ಪ್ರಪಾತದ ಭೀಕರತೆಯಲ್ಲಿ ಮೈ ಜುಮ್ ಅನ್ನಿಸಬೇಕು ಎಂಬ